CW.13 PW.4

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1690/2022

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ್ ಎಸ್ |
| ತಂದೆಯ ಹೆಸರು | ಶಿವಲಿಂಗಪ್ಪ |
| ವಯಸ್ಸು | 36 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 16.07.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿ ಗೊತ್ತಿರುವುದಿಲ್ಲ. ಚಾಸಾ-1 ರಿಂದ 12 ರವರು ಗೊತ್ತಿರುವುದಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಸುಮಾರು 5-6 ವರ್ಷಗಳ ಹಿಂದೆ ಪೋಲೀಸ್ ಠಾಣೆಗೆ ಬೇರೆ ಯಾವುದೋ ಕೆಲಸದ ಮೇರೆಗೆ ಹೋದಾಗ ಅಲ್ಲಿ ಎರಡು ಖಾಲಿ ಬಿಳಿಯ ಹಾಳೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನಗೆ ಯಾವುದಕ್ಕೆ ಮತ್ತು ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಅಮಾನತು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ದಿನಾಂಕ 23.03.2022 ರಂದು ಕನಕಪುರ ಟೌನ್, ಕನಕಪುರ ವೃತ್ತ ಕಚೇರಿಯ ಮುಂದೆ ನನ್ನ ಹಾಗೂ ಚಾಸಾ-12 ಹಾಗೂ ಆರೋಪಿಯ ಸಮಕ್ಷಮದಲ್ಲಿ ಸಂಜೆ 4.15 ರಿಂದ 4.45 ಗಂಟೆಯವರೆಗೂ ಈಗ ಓದಿ ಹೇಳಿದಂತೆ ಮಹಜರ್ ಮಾಡಿ ಅಪಘಾತ ಪಡಿಸಿದ ಹಾಗೂ ಅಪಘಾತಕ್ಕೆ ಒಳಗಾದ ವಾಹನಗಳನ್ನು ಅಮಾನತು ಪಡಿಸಿಕೊಂಡು ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ಗೊತ್ತಿದ್ದರೂ ಸಹಿತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಏನೂ ಇರುವುದಿಲ್ಲ**

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**